ಬೆಳಗಿನ ಅಡುಗೆ ಮಾಡಿದ್ದಳು. ಸ್ನಾನ ಮಾಡಿ, ಗುಡಿಗೆ ಹೋಗಲು ಅಣಿಯಾಗಿದ್ದಳು. ದೇವರ ಪೂಜೆಗೆ ಮಲ್ಲಿಗೆಯ ಹೂಗಳನ್ನು ತೆಗೆದಿರಿಸಿದ್ದಳು.

ಮಿನ್ನಿ ಹೋದ ಅನಂತರ, ಅಂಗಳದ ಮಂಚದ ಮೇಲೆ, ಮಲನ್ ಆಲಸ್ಯದಿಂದ ಒರಗಿದಳು. ಅವಳಿಗಿನ್ನೂ ನಿದ್ರಿಸುವುದಿತ್ತು. ತಲೆಯಲ್ಲಿ ಕನಸುಗಳು ತುಂಬಿದ್ದವು.

ತಣ್ಣನೆಯ ಗಾಳಿ ಬೀಸುತ್ತಿತ್ತು. ಬೆಚ್ಚಗಿನ ಬಿಸಿಲು ಅಂಗಳದಲ್ಲಿ ಹರಡಿತ್ತು. ಕಂಠಪೂರ್ತಿ ತುಂಬಿದ ಹಾಲಿನ ಪಾತ್ರೆಯಲ್ಲಿ ಮಲ್ಲಿಗೆಯ ದಳಗಳು ತೇಲಿದಂತೆ, ಮಲನ್‌ಳ ತನು ಮನ ಹಗುರಾಗಿತ್ತು. ಅದೊಂದು ವಿಚಿತ್ರವಾದ ಮಾದಕತೆ. ಅವಳ ಕಣ್ಣುಗಳು ಮುಚ್ಚಿ, ತೆರೆದು, ಮತ್ತೆ ಮುಚ್ಚುತ್ತಿದ್ದವು.

"ಏ ಮಲನ್, ಆ ಸೂಳೆ ಎಲ್ಲಿ?" ಧ್ವನಿಯೊಂದು ಕೂಗಿ ಕೇಳಿತು. ಮಲನ್‌ಳಿಗೆ ಯಾರೋ ಕಪಾಳಕ್ಕೆ ಬಾರಿಸಿದಂತಾಯಿತು. "ಹಿಂದೆಂದೂ ಈ ತರಹ ನಡೆದಿದ್ದು ಕೇಳಿಲ್ಲ. ಮದುವೆಗೆ ಇನ್ನೂ ನಾಲ್ಕೇ ದಿನ ಬಾಕಿ ಇದೆ!''

"ನನ್ನ ಮಗಳು ಏನು ಮಾಡಿದಳು?" ಮಲನ್ ಸಿಟ್ಟಿನಿಂದ ಕಿರುಚಿದಳು. ''ಅವಳು ಕರುವಿನಂತೆ ಏನೂ ಅರಿಯದ ಮುಗ್ಧಳು" ಪಕ್ಕದ ಮಾನೆಯಾಕೆ ಲೇವಡಿಯ ಉದ್ಗಾರದಿಂದ ಜರಿದಳು: ''ನಿನ್ನ ಎಳೆಗರು ಇಡೀ ರಾತ್ರಿ ಸಗಣಿ ಗುಡ್ಡೆಯ ಮೇಲಿತ್ತು."

ಮಲನ್‌ಳ ದೇಹ ತಣ್ಣಗಾಯಿತು, ಅವಳ ನರನಾಡಿಗಳಿಂದ ರಕ್ತ ಇಂಗಿಹೋಯಿತು. ಸಾವಿನ ನಿಸ್ತೇಜತೆ ಅವಳ ಮುಖದ ಮೇಲೆ ಹರಡಿತು. ನೆರೆಮನೆಯ ಲಾಜೋ ಹೇಳುತ್ತಿದ್ದಳು. "ಇನ್ನೂ ಕತ್ತಲಾಗಿರಲಿಲ್ಲ, ಆಗಲೇ ಆ ಸೂಳೆ ಅಪರಿಚಿತನ ಜೊತೆ ಹೊರಗೆ ಹೋದಳು. ಶೌಚಕ್ಕೆಂದು ನಾನು ಎದ್ದಾಗ, ಅವರು ಹೊಲಗಳ ಕಡೆ ಸೊಂಟವನ್ನು ಬಳಸಿ, ನಡೆದು ಹೋಗುತ್ತಿದ್ದುದನ್ನು ನೋಡಿದೆ. ಇಡೀ ರಾತ್ರಿ ನನಗೆ ನಿದ್ರೆ ಬರಲಿಲ್ಲ. ನಮ್ಮ ಹೆಣ್ಣುಮಕ್ಕಳ ಒಳತಿಗಾಗಿ ನಾನವರನ್ನು ಕಾಯಬೇಕಲ್ಲವೇ. ಈ ರೀತಿ ತನ್ನ ಅಪ್ಪಅಮ್ಮನ ಮುಖಕ್ಕೆ ಮಸಿ ಬಳಿದ ಕೆಲಸ ಮಾಡಿರುವುದನ್ನು ನಾನು ಕೇಳೇ ಇರಲಿಲ್ಲ."

ಮಲನ್ ಕಲ್ಲಿನಂತೆ ನಿಶ್ಚಲವಾಗಿ ಕುಳಿತುಬಿಟ್ಟಳು.



ಅವರಾಡಿದ ಮಾತುಗಳ್ಯಾವುದೂ ಅವಳ ಕಿವಿಗೆ ಬಿದ್ದಂತೆ ತೋರಲಿಲ್ಲ.

ಹಳ್ಳಿಯ ಕಾವಲುಗಾರ, ಲಾಜೋ ಹೇಳಿದ ಕಥೆಯನ್ನು ಮುಂದುವರೆಸಿದ:

"ಮಲನ್ ಅತ್ತಿಗೆ" ಅವನು ಅವಳ ಗಮನವನ್ನು ಸೆಳೆಯಲು ಪ್ರಯತ್ನಿಸಿದ.

"ಏನು, ಜುಮ್ಮಾ?" ಅವಳ ಧ್ವನಿ ಬಾವಿಯಾಳದಿಂದ ಬಂದಂತಿತ್ತು.

"ಭಾಬಿ, ಈ ವಿಷಯವನ್ನು ಅಷ್ಟು ಸುಲಭವಾಗಿ ಹೇಳಲು ಆಗುವುದಿಲ್ಲ, ನಿನ್ನೆ ರಾತ್ರಿ ಆಗಬಾರದ್ದು ಆಗಿಹೋಯಿತು. ನನಗೂ ವಯಸ್ಸಾಗಿ ಕೂದಲು ನೆರೆದಿದೆ. ಈ ಹಳ್ಳಿಯ ಕಾವಲುಗಾರನಾಗಿ, ನನಗೆಂದೂ ಇಂತಹ ಹಗರಣದ ಬಗ್ಗೆ ನೆನಪಿಲ್ಲ. ಅರಳಿ ಮರದ ಕೆಳಗೆ, ನಿನ್ನ ಮಗಳು, ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡಿ ಬಿಟ್ಟಳು. ನಾನು ಎರಡು ಸಲ, ಹತ್ತು ಹೆಜ್ಜೆ ದೂರದಿಂದ ಸಾಗಿ ಬಂದೆ. ಅಲ್ಲಿ ಅವರು ಕಾಲಿಗೆ ಕಾಲನ್ನು ಹೊಸೆದು ಜಗತ್ತಿನ